

# ಕರ್ಮಯೋಗಿ

ಹೊತ್ತ ಹೊರೆ ಭಾರವಾದರೂ ಸರಿಯೇ
ತುತ್ತು ಕೂಳಿನ ನಿರೀಕ್ಷೆಯಲ್ಲಿ
ಮನದ ಬೇಗುದಿಯ ಬದಿಗಿರಿಸಿ
ಹಲ್ಲು ಕಚ್ಚಿಕೊಂಡೇ
ಸಾಗಿದ್ದೇನೆ

ಮೌನ ಪಯಣದ ಹಾದಿಯಲಿ
ಅನಿಶ್ಚಿತ ಯಾನ ನನ್ನದು

ಎಲ್ಲವೂ ಹೊಟ್ಟೆಗಾಗಿ
ಗೇಣು ಬಟ್ಟೆಗಾಗಿ

ಮಹಲುಗಳಲಿ ಕೂತ
ಮಹಾಮಹಿಮರಿಗೆ ಅರಿವಿಲ್ಲ
ನಮ್ಮಂಥವರ ಪಾಡು,
ಕಾಲಚಕ್ರದ ಪಥದಲ್ಲಿ
ಕೊಂಚ ಆಯ ತಪ್ಪಿದರೂ
ನೆಲತಬ್ಬುವುದು ನಿಶ್ಚಿತ

ಇಂದಿನ ದುಡಿಮೆ ಇಂದಿಗಷ್ಟೇ
ನಾಳೆಯದು ನಾಳೆಗೆ!
ರೆಟ್ಟೆ ಗಟ್ಟಿಯಿದ್ದರಷ್ಟೇ
ತುಂಬುವುದು ಹೊಟ್ಟೆ
ಇಲ್ಲದಿರೆ ಈ ಬದುಕೇ
ಲೊಳಲೊಟ್ಟೆ !!

**-ಸುಧಾ ಜಯಪ್ರಕಾಶ**

**ತಲವಾಟ, ಸಾಗರ**



# ನೂರು ಹೆಜ್ಜೆ

ತಳ್ಳುಗಾಡಿಯ ತುಂಬಾ ದೈತ್ಯ ಪೆಟ್ಟಿಗೆಗಳು
ತುಂಬಿಹುದು ತರಾವರಿ ತೂಕದ ಜವಾಬುಗಳು

ಪೆಟ್ಟಿಗೆಗಳ ತಬ್ಬಿರುವ
ಪ್ಲಾಸ್ಟರ್‌ಗೆ ಗೊತ್ತು
ಪುಟ್ಟಣ್ಣನ ಕೈಗೆ ಅಂಟಿರುವ ಹೊಣೆಗಾರಿಕೆ
ಅಂಗೈ ಬೆವರಲಿ ತೋಯ್ದ ಹಿಡಿಕೆ

ಬೇಳೆಕಾಳು ದಿನಸಿ ಸಾಮಗ್ರಿಯ
ವೇಳಾಪಟ್ಟಿಯಲ್ಲಿ ಅಡ್ಡ ಗೆರೆಗಳ ಮೇಲೆ
ತೇಲುತ್ತಿವೆ ಕನಸುಗಳ ಬುಟ್ಟಿ

ಭರವಸೆಯ ಗಾಲಿಗಳಲಿ
ಸವೆಸಿದ ಮೈಲಿಗಳ ಗುರುತು
ಕಣ್ಮುಂದಿದೆ ನೂರು ಹೆಜ್ಜೆ
ನೂಕಬೇಕಿದೆ ತಳ್ಳುಗಾಡಿಯ
ದಣಿವ ಮರೆತು!

**-ಯಶಸ್ವಿನಿ ಎಂ.ಎನ್.,**

**ಮೈಸೂರು**